| |
|---|
| **Deposition Sheets (RP.No.57) Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 544/2024**

ಪಿ.ಡಬ್ಲ್ಯು : 1 ಸಿ.ಡಬ್ಲ್ಯು : 1

ಸಾಕ್ಷಿದಾರಳ ಹೆಸರು : ಶ್ರಾವ್ಯ
ತಂದೆಯ ಹೆಸರು : ಉಮೇಶ್ ಆಚಾರ್ಯ
ಪ್ರಾಯ : 25 ವರ್ಷ
ಉದ್ಯೋಗ : ರಾಸಾಯನಿಕ ತಜ್ಞೆ
ವಾಸ : ನಂದಳಿಕೆ

ದಿನಾಂಕ 20-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ಸಾಕ್ಷಿಯು ನ್ಯಾಯಾಲಯ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಚಾಸಾ-3 ರವರ ಪರಿಚಯ ಇದೆ. ಅವರು ನನ್ನ ಸಹೋದ್ಯೋಗಿ. ಚಾಸಾ-2 ರವರ ಪರಿಚಯ ಇಲ್ಲ.

ನಾನು ಒಂದೂವರೆ ವರ್ಷದ ಹಿಂದೆ ಕಾರ್ಕಳದ ಶ್ರೀರಾಮ್ ಫೈನಾನ್ಸ್ ನಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದೆ. ಆ ಸಮಯದಲ್ಲಿ ಆರೋಪಿ ಘಟನೆ ನಡೆಯುವ 3 ದಿನ ಗಳ ಹಿಂದಿನಿಂದ ಬೆಳ್ಳಿಗ್ಗೆ ಮತ್ತು ಸಂಜೆ ನಾನು ಕೆಲಸಕ್ಕೆ ಹೋಗುವ ಹಾಗೂ ಬರುವ ಸಮಯಗಳಲ್ಲಿ ನನ್ನನ್ನು ಹಿಂಬಾಲಿಸುತ್ತಿದ್ದುದ್ದನ್ನು ನಾನು ಗಮನಿಸಿರುತ್ತೇನೆ. ದಿಃ 27-12-2023 ರಂದು ಸಂಜೆ 5.30 ಗಂಟೆಗೆ ಆರೋಪಿ ನಾನು ಮನೆಗೆ ಹೋಗುವ ಸಮಯದಲ್ಲಿ ನಮ್ಮ ಕಚೇರಿಯ ಕಟ್ಟಡದ ಕೆಳಗೆ ಮೆಟ್ಟಿಲು ಇಳಿಯುವಾಗ ನನ್ನನ್ನು ಹಿಂಬಾಲಿಸಿ ಬಂದು, 'ಈಗ ಕೆಲಸ ಆಯಿತಾ' ಎಂದು ಕೇಳಿರುತ್ತಾರೆ ಅದಕ್ಕೆ

ಅದು ನಿಮಗ್ಯಾಕೆ ಎಂದು ನಾನು ಕೇಳಿರುತ್ತೇನೆ. ನಂತರ ಈ ವಿಚಾರವನ್ನು ಕಚೇರಿಯ ಒಳಗಿದ್ದ ಚಾಸಾ-4 ರವರಿಗೆ ಕರೆ ಮಾಡಿ ತಿಳಿಸಿರುತ್ತೇನೆ. ನಂತರ ಬಸ್ಸು ಹತ್ತಿರುತ್ತೇನೆ. ನಂತರ ಚಾಸಾ-4 ರವರು 2 ನಿಮಿಷಗಳ ನಂತರ ನನಗೆ ಕರೆ ಮಾಡಿ, ನಾವು ಆರೋಪಿಯನ್ನು ವಿಚಾರಿಸಲಾಗಿ, ಆತ ನಾನೇ ಖುದ್ದಾಗಿ ಆರೋಪಿಯನ್ನು ಮಾತನಾಡಿಸಿರುವುದಾಗಿ ಹೇಳಿದ್ದು, ಕಚೇರಿಯ ಬಳಿ ಬರುವಂತೆ ತಿಳಿಸಿರುತ್ತಾರೆ. ನಾನು ಅದರಂತೆ ಕಚೇರಿಯ ಬಳಿ ಹೋಗಿದ್ದು, ಅಲ್ಲಿ ಚಾಸಾ-3 ಮತ್ತು ಚಾಸಾ-5 ರವರು ಇದ್ದರು. ನಂತರ ನಾನು ಆರೋಪಿಗೆ ನಾನು ಯಾವಾಗ ನಿನ್ನನ್ನು ಮಾತನಾಡಿಸಿರುತ್ತೇನೆ ಎಂದು ಕೇಳಿ ವಾಪಸ್ಸು ಬಸ್ಸು ಹತ್ತಲು ಬಂದಿರುತ್ತೇನೆ. ಅದೇ ದಿನ ರಾತ್ರಿ 8.00 ಗಂಟೆಗೆ ಆರೋಪಿ ವಿರುದ್ಧ ಠಾಣೆಗೆ ಬಂದು ದೂರು ನೀಡಿರುತ್ತೇನೆ.

ಸಾಕ್ಷಿಯು ತಾನು ನೀಡಿದ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದಿಃ 30-12-2023 ರಂದು ಪೊಲೀಸರು ಸ್ಥಳ ಮಹಜರಿಗಾಗಿ ಬಂದಿದ್ದು, ಅವರಿಗೆ ಸ್ಥಳವನ್ನು ನಾನೇ ತೋರಿಸಿ ಕೊಟ್ಟಿರುತ್ತೇನೆ. ನಂತರ ಪೋಲಿಸರು ನಾನು ತೋರಿಸಿಕೊಟ್ಟಂತೆ ನನ್ನ ಹಾಗೂ ಚಾಸಾ-3 ಮತ್ತು 4 ರವರ ಸಮಕ್ಷಮ ಮಧ್ಯಾಹ್ನ ಸಮಯದಲ್ಲಿ ಸ್ಥಳ ಮಹಜರು ಮಾಡಿ, ಭಾವಚಿತ್ರಗಳನ್ನು ತೆಗೆದಿರುತ್ತಾರೆ ಹಾಗೂ ಮಹಜರಿಗೆ ನಮ್ಮ ಸಹಿ ಪಡೆದಿರುತ್ತಾರೆ. ಸಾಕ್ಷಿಯು ಸ್ಥಳ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯ ಸ್ಥಳ ಮಹಜರು ವೇಳೆ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ನಂತರ ದಿಃ 28-12-2023 ರಂದು ನ್ಯಾಯಾಧೀಶರ ಮುಂದೆ ನನ್ನ ಹೇಳಿಕೆಯನ್ನು ದಾಖಲಿಸಿರುತ್ತೇನೆ. ಸಾಕ್ಷಿಯು ಕಲಂ 164 ಸಿ.ಆರ್.ಪಿ.ಸಿ ಅಡಿಯಲ್ಲಿ ನ್ಯಾಯಾಧೀಶರ ಮುಂದೆ ನೀಡಿದ ತನ್ನ ಹೇಳಿಕೆಯಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದು, ಸದ್ರಿ ಹೇಳಿಕೆಯನ್ನು ನಿಪಿ-4 ಎಂದು, ಸಾಕ್ಷಿಯ 3 ಸಹಿಗಳನ್ನು ನಿಪಿ-4(ಎ) ಯಿಂದ 4(ಸಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲು ಃ ಆರೋಪಿ ಪರ ಃ ಶ್ರೀ ಪಿ.ಎ.ಎಸ್ ವಕೀಲರಿಂದಃ

ಆರೋಪಿ ಘಟನೆ ನಡೆಯುವ 3 ದಿನಗಳ ಹಿಂದಿನಿಂದ ಹಿಂಬಾಲಿಸುತ್ತಿದ್ದುದನ್ನು ನಾನು ಗಮನಿಸಿರುತ್ತೇನೆ ಎಂದು ನನ್ನ ದೂರಿನಲ್ಲಿ ಕಾಣಿಸಿರುತ್ತೇನೆ. ಆರೋಪಿ ನನ್ನನ್ನು ಸುಮಾರು 20-25 ಮೀಟರ್ ಅಂತರದಲ್ಲಿ ಗೋಪಾಲ್ ಟವರ್ಸ್ ಜಂಕ್ಷನ್ ನಿಂದ ಕಚೇರಿಗೆ ಹೋಗುವವರೆಗೆ ಹಿಂಬಾಲಿಸುತ್ತಿರುವ ಬಗ್ಗೆ ನಾನು ಗಮನಿಸಿರುತ್ತೇನೆ. ಗೋಪಾಲ್ ಟವರ್ಸ್ ಸಾಕಷ್ಟು ಅಂಗಡಿ ಮುಂಗಟ್ಟು ಇರುವ ಸಂಕೀರ್ಣ. ಅದರಲ್ಲಿ ಸಾಗರ್ ಹೋಟೇಲ್, ವೈನ್ ಶಾಪ್, ಫ್ಯಾನ್ಸಿ ಸ್ಟೋರ್ ಇದೆ. ನನ್ನ ಆರೋಪಿ ನಡುವೆ ಎಷ್ಟು ಜನ ಇದ್ದರು ಎಂದು ನಾನು ನೋಡಿರುವುದಿಲ್ಲ. ಗೋಪಾಲ್ ಟವರ್ಸ್ ಸಂಕೀರ್ಣದಲ್ಲಿರುವ ಅಂಗಡಿಗಳಿಗೆ ಸಾಕಷ್ಟು ಜನ ಬರುತ್ತಾರೆ. ಅವರಲ್ಲಿ ಸಾಕಷ್ಟು ಜನ ನಿಯಮಿತ ಗಿರಾಕಿಗಳು ಎಂದರೆ ಇರಬಹುದು. ನನ್ನ ಮತ್ತು ಆರೋಪಿ ನಡುವೆ ಘಟನಾ ಹಿಂದಿನ ಮೂರು ದಿನಗಳಲ್ಲಿ ಯಾವುದೇ ಮಾತುಕತೆ ಆಗಿರುವುದಿಲ್ಲ. ನನ್ನನ್ನು ಆರೋಪಿ 3 ದಿನ ಹಿಂಬಾಲಿಸುತ್ತಿದ್ದ ಬಗ್ಗೆ ಯಾವ ಆಧಾರ ಮೇಲೆ ಹೇಳುತ್ತೀರಾ ಎಂದರೆ ನನ್ನ ಅನುಭವಕ್ಕೆ ಬಂದಿರುತ್ತದೆ.

ಸಾಕ್ಷಿಯಾಗಿ ಕಾಣಿಸಿರುವ ಚಾಸಾ-2 ರವರು ನನಗೆ ಗೊತ್ತಿರುವ ಶರತ್ ಎಂದು ನನಗೆ ಖಚಿತವಾಗಿ ಗೊತ್ತಿರುವುದಿಲ್ಲ. ನಾನು 4 ಚಕ್ರ ವಾಹನಗಳ ಸಾಲದ ವಹಿವಾಟಿನ ಕಚೇರಿಯಲ್ಲಿ ಕೆಲಸ ಮಾಡುತ್ತೇನೆ. ಅಲ್ಲಿ ಶರತ್ ಎಂಬ ಸಿಬ್ಬಂದಿ ಇರುವುದಿಲ್ಲ. ಚಾಸಾ-3 ರಿಂದ 5 ರವರು 4 ಚಕ್ರ ವಾಹನಗಳ ಸಾಲದ ವಹಿವಾಟಿನ ಕಚೇರಿಯಲ್ಲಿ ಕೆಲಸ ಮಾಡುತ್ತಾರೆ. ಶ್ರಿರಾಮ್ ಫೈನಾನ್ಸ್ ನ ದ್ವಿಚಕ್ರ ಹಾಗೂ ನಾಲ್ಕು ಚಕ್ರ ವಾಹನಗಳ ಸಾಲದ ವಹಿವಾಟಿಗೆ ಒಂದೇ ಪ್ರವೇಶ ದ್ವಾರ ಇದೆ. ಯಾವುದೇ ವಿಭಾಗ ಇರುವುದಿಲ್ಲ. ನಮ್ಮ ಕಚೇರಿಯಲ್ಲಿ ಒಟ್ಟು 7 ಜನ ಕೆಲಸಗಾರರಿದ್ದರು. ಎಲ್ಲರಿಗೂ ಒಂದೇ ವಿಭಾಗದಲ್ಲಿ ಸಂಬಳ ಆಗುತ್ತದೆಯಾ ಎಂದರೆ ಗೊತ್ತಿಲ್ಲ.

ನಮ್ಮ ಕಚೇರಿ ಗೋಪಾಲ್ ಟವರ್ಸ್ ಕಟ್ಟಡದ ಒಂದನೇ ಮಹಡಿಯಲ್ಲಿದೆ. ಇಡೀ ಕಟ್ಟಡ ಚೌಕಾಕೃತಿಯಲ್ಲಿದೆ. ಗೋಪಾಲ್ ಟವರ್ಸ್ ಕಟ್ಟಡದ ಯಾವ ವಿಂಗ್ ನಲ್ಲಿ ನಿಮ್ಮ ಕಚೇರಿ ಇದೆ ಎಂದರೆ ಗೊತ್ತಿಲ್ಲ. ಗೋಪಾಲ್ ಟವರ್ಸ್ ಕಟ್ಟಡದಿಂದ ಕೆಳಗೆ ಬರುವ

ಮೆಟ್ಟಿಲು ಯು ಆಕಾರದಲ್ಲಿರುತ್ತದೆ. ನೆಲದಿಂದ 2 ಮೆಟ್ಟಿಲು ಕೆಳಗೆ ಇಳಿಯಿಯುವಾಗ ಆರೋಪಿ ನನ್ನನ್ನು ಮಾತನಾಡಿಸಿರುತ್ತಾನೆ. ಆ ಸಮಯದಲ್ಲಿ ನಮ್ಮ ಇತರ ಸಿಬ್ಬಂದಿಗಳು ಕಚೇರಿಯಲ್ಲಿದ್ದರು. 4-5 ವರ್ಷಗಳಿಂದ ಕ್ಯಾಮರಾ ಇರುವ ಮೊಬೈಲನ್ನು ಉಪಯೋಗಿಸುತ್ತೇನೆ. ಅದರಲ್ಲಿ ವಾಯಿಸ್ ರೆರ್ಕಾಡಿಂಗ್ ಮಾಡಬಹುದು. ಪ್ರಶ್ನಿತ ಘಟನಾ ದಿನ ಆರೋಪಿಯ ಮುಖ ಚಹರೆ ಹಾಗೂ ವಾಯಿಸ್ ನ್ನು ಮೊಬೈಲಿನಲ್ಲಿ ಸೆರೆ ಹಿಡಿಯುವ ಪ್ರಯತ್ನ ಮಾಡಿದ್ದಿರಾ ಎಂದರೆ ಇಲ್ಲ. ಮುಂದುವರಿದು ತಕ್ಷಣ ಮಾಡಲು ಸಾಧ್ಯವಾಗಿರುವುದಿಲ್ಲ. ಮೆಟ್ಟಿಲು ಇಳಿಯವಾಗ ಆರೋಪಿ ನನ್ನ ಮುಂದೆ ಕೆಳಗೆ ಇದ್ದರು. ಆ ಸಮಯದಲ್ಲಿ ನಿಮಗೆ ನಿಮ್ಮ ಕಚೇರಿಗೆ ಹಿಂದೆ ಹೋಗಲು ಯಾವುದಾದರೂ ತೊಂದರೆ ಇತ್ತಾ ಎಂದರೆ ಇಲ್ಲ. ಅಲ್ಲಿಂದ ಮುಂದಕ್ಕೆ ಹೋಗಿ ಚಾಸಾ-3 ರವರಿಗೆ ಕರೆ ಮಾಡಿರುತ್ತೇನೆ. ಆ ಸಮಯದಲ್ಲಿ ಚಾಸಾ-3 ರವರು ನಿಮ್ಮನ್ನು ನಿಲ್ಲಲು ಹೇಳಿರುತ್ತಾರಾ ಎಂದರೆ ಸಾಕ್ಷಿ ನೀವು ಹೋಗಿ ನಾವು ನೋಡಿಕೊಳ್ಳುತ್ತೇವೆ ಎಂದು ಹೇಳಿರುತ್ತಾರೆ. ಚಾಸಾ-3 ರವರಿಗೆ ಕರೆ ಮಾಡಿದ ಸ್ಥಳದಿಂದ ಬಸ್ಸು ಹತ್ತುವ ಸ್ಥಳ 50 ಮೀಟರು ದೂರದಲ್ಲಿತ್ತು. ನಾನು ಬಸ್ಸು ಹತ್ತುವ ಸ್ಥಳ ಮಹಾಲಕ್ಷ್ಮೀ ಹೋಟೇಲ್ ಎಂದುರು ಎಂದರೆ ಕೆಲವು ಸಂದರ್ಭಗಳಲ್ಲಿ ಮುಂದಕ್ಕೆ ಹೋಗಿ ನಿಲ್ಲುತ್ತದೆ. ಪ್ರಶ್ನಿತ ಘಟನೆ ದಿನ ಬಸ್ಸು ಮಹಾಲಕ್ಷ್ಮೀ ಹೋಟೇಲಿಗಿಂತ ಮುಂದೆ ಬಸ್ಸು ನಿಲುಗಡೆ ಮಾಡುವಂತಹ ಸ್ಥಳದಲ್ಲಿಯೇ ನಿಂತಿತ್ತು. 50 ಮೀಟರು ಅಂತರದಲ್ಲಿ ಸಾಕಷ್ಟು ಅಂಗಡಿಗಳಿವೆ ಎಂದರೆ ಸರಿ. ಬಸ್ಸು ನಿಲ್ದಾಣದಿಂದ ಎಷ್ಟು ದೂರದಲ್ಲಿ ಬಸ್ಸು ನಿಂತಿತ್ತು ಎಂದು ಈಗ ಹೇಳಲು ಬರುವುದಿಲ್ಲ. ಬಸ್ಸು ನಿಲ್ದಾಣದಲ್ಲಿ ಪೋಲಿಸ್ ಔಟ್ ಪೋಸ್ಟ್ ಇದೆ ಎಂದರೆ ಗೊತ್ತಿಲ್ಲ. ಬಸ್ಸು ನಿಲ್ದಾಣದಲ್ಲಿ ಪೋಲಿಸರು ಇರುತ್ತಾರೆ ಎಂದರೆ ಗೊತ್ತಿಲ್ಲ.

ಪ್ರಶ್ನಿತ ಘಟನಾ ಸಮಯದಲ್ಲಿಯೇ ನನ್ನ ಸಹೋದ್ಯೋಗಿಗಳು ಆರೋಪಿಯ ವಿರುದ್ಧ ದೂರು ನೀಡಲು ಹೇಳಿರುವುದಿಲ್ಲ. ನನಗೆ ಚಾಸಾ-4 ರವರು 2 ನಿಮಿಷಗಳ ನಂತರ ಪುನಃ ಕರೆ ಮಾಡಿ ವಾಪಸ್ಸು ಕಚೇರಿ ಬಳಿ ಬರಲು ಹೇಳಿರುತ್ತಾರೆ. ಆ ಸಮಯದಲ್ಲಿ ಆರೋಪಿಯನ್ನು ಹಿಡಿದಿಟ್ಟಿದ್ದರು. ಆ ಸಮಯದಲ್ಲಿ ಆರೋಪಿಯ ವಿರುದ್ಧ ಪೋಲಿಸರಿಗೆ ದೂರು ನೀಡಬೇಕೆಂದು ನನಗೆ ಅನಿಸಿರುತ್ತದೆ ಹಾಗೂ ನನ್ನ ಸಿಬ್ಬಂದಿಗಳು ಹೇಳಿರುತ್ತಾರೆ. ಆದರೆ ಆ ಕ್ಷಣ ದೂರು ನೀಡಲು ಹೋಗಿರುವುದಿಲ್ಲ.

ಆರೋಪಿ ಸ್ಥಳದಲ್ಲಿ ಇದ್ದ ಎಂದು ಹೇಳಲು ನಾನಾಗಲೀ ನನ್ನ ಸಹೋದ್ಯೋಗಿಗಳಾಗಲೀ ಭಾವಚಿತ್ರ ತೆಗೆಯುವ ಪ್ರಯತ್ನ ಮಾಡಿರುವುದಿಲ್ಲ. ನಂತರ ಠಾಣೆಗೆ ಬರಲು ಚಾಸಾ-5 ರವರು 7.30 ಗಂಟೆಗೆ ಕರೆ ಮಾಡಿ ತಿಳಿಸಿರುತ್ತಾರೆ. ನಾನು ಠಾಣೆಗೆ ಹೋದಾಗ ಚಾಸಾ-3 ರಿಂದ 5 ಮತ್ತು ಉದಯ ಕೋಟ್ಯಾನ್, ಅಶೋಕ್ ಕೋಟ್ಯಾನ್ ಇದ್ದರು ಎಂದರೆ ಸರಿ. ಠಾಣೆಯಲ್ಲಿ ಬೇರೆ ಜನ ಇದ್ದರು. ಆದರೆ ಅವರ ಪರಿಚಯ ಇಲ್ಲ. ಉದಯ ಕೋಟ್ಯಾನ್ ಮತ್ತು ಅಶೋಕ್ ಕೋಟ್ಯಾನ್ ರವರು ಭಾಸ್ಕರ ಕೋಟ್ಯಾನ್ ರವರ ಸಹೋದರರು ಎಂದರೆ ಗೊತ್ತಿಲ್ಲ. ನಾನು ಠಾಣೆಗೆ ಹೋಗುವ ಪೂರ್ವದಲ್ಲಿಯೇ ಆರೋಪಿಯನ್ನು ವಿಚಾರಿಸಿ ಠಾಣೆಯಲ್ಲಿ ಇಟ್ಟುಕೊಂಡಿದ್ದರು ಹಾಗೂ ಅವರಿಗೆ ಮಾಹಿತಿ ಗೊತ್ತಿತ್ತು. ದೂರು ಬರೆದು ಕೊಡಿ ಎಂದು ಹಾಳೆ ಕೊಟ್ಟಿರುತ್ತಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಒಂದು ಬಾರಿ ಠಾಣೆಗೆ ಹೋಗಿರುತ್ತೇನೆ. ಎಷ್ಟು ಸಹಿ ಹಾಕಿರುತ್ತೇನೆ ಎಂದು ನೆನಪಿಲ್ಲ. ನ್ಯಾಯಾಧೀಶರ ಮುಂದೆ ಹೇಳಿಕೆ ಕೊಡುವ ಪೂರ್ವದಲ್ಲಿ ಠಾಣೆಗೆ ಬರುವಂತೆ ಪೋಲಿಸರು ಹೇಳಿದ್ದರು. ಆ ದಿನ ಠಾಣೆಯಲ್ಲಿ ಎಷ್ಟು ಸಹಿ ಹಾಕಿರುತ್ತೀರಾ ಎಂದರೆ ನೆನಪಿಲ್ಲ. ನಾನು ನನ್ನ ಕಚೇರಿ ಕೆಳಗೆ ಮೆಟ್ಟಿಲ ಬಳಿ ನಿಂತಿದ್ದೇನೆ ಎಂದು ಹೇಳುವ ಸ್ಥಳದಿಂದ ನಿಮ್ಮ ಕಚೇರಿ ಕಾಣಿಸುವುದಿಲ್ಲ ಎಂದರೆ ಸರಿ. ನಾನು ನಿಂತಿದ್ದ ಸ್ಥಳದಿಂದ ಮೇಲೆ ನಮ್ಮ ಕಚೇರಿ ಸಿಬ್ಬಂದಿ ಹೊರಗೆ ನಿಂತಿರುವುದನ್ನು ನೋಡಿರುತ್ತೇನೆ. ನಿಮ್ಮ ಕಚೇರಿ ಯಾವಾಗ ಮುಚ್ಚುತ್ತದೆ ಎಂದರೆ ನಿಗದಿತ ಸಮಯ ಇರುವುದಿಲ್ಲ. ಕೆಲಸದ ಆಧಾರದ ಮೇಲೆ ಮುಚ್ಚುತ್ತಿದ್ದರು. ನಾನು ಕಚೇರಿಯಿಂದ ಹೊರಟ ನಂತರ ಚಾಸಾ-4 ರವರಿಗೆ ಕರೆ ಮಾಡುವ ವರೆಗೆ ನಮ್ಮ ಹಾಗೂ ನಮ್ಮ ಕಚೇರಿ ಸಿಬ್ಬಂದಿಗಳ ನಡುವೆ ಮಾತುಕತೆ ಆಗಿರುವುದಿಲ್ಲ. ಪ್ರಶ್ನಿತ ಘಟನಾ ದಿನ ನಾನು ಕಚೇರಿಯಿಂದ ಕೆಳಕ್ಕೆ ಬರುವಾಗ ಆರೋಪಿಯನ್ನು ನೋಡಿರುತ್ತೀರಾ ಎಂದರೆ ಜಂಕ್ಷನ್ ನಲ್ಲಿರುವ ಸ್ವೀಟ್ ಅಂಗಡಿಯಿಂದ ನನ್ನ ಬಳಿ ಬಂದಿರುವುದನ್ನು ನೋಡಿರುತ್ತೇನೆ. ಈ ಬಗ್ಗೆ ನಾನು ನನ್ನ ಪಿರ್ಯಾದಿಯಲ್ಲಾಗಲೀ, ಮುಖ್ಯ ವಿಚಾರಣೆಯಲ್ಲಾಗಲೀ ಹೇಳಿರುವುದಿಲ್ಲ ಎಂದರೆ ಸಾಕ್ಷಿ ನೀವು ಬಿಡಿಸಿ ಕೇಳುವಾಗ ಹೇಳಿರುತ್ತೇನೆ ಎಂದು ನುಡಿದಿರುತ್ತಾರೆ. ಆರೋಪಿ ನನ್ನನ್ನು ಹಿಂಬಾಲಿಸುವ ಉದ್ದೇಶದಿಂದಲೇ ಬಂದಿರುತ್ತಾನೆ

ಎಂದು ನಿಮ್ಮ ಪಿರ್ಯಾದಿಯಲ್ಲಾಗಲೀ, ಮುಖ್ಯ ವಿಚಾರಣೆಯಲ್ಲಾಗಲೀ, ನ್ಯಾಯಾಧೀಶರ ಮುಂದೆ ನೀಡಿದ ಹೇಳಿಕೆಯಲ್ಲಾಗಲೀ ತಿಳಿಸಿರುವುದಿಲ್ಲ ಎಂದರೆ ಸರಿ.

ಅಶೋಕ್ ಕೊಟ್ಯಾನ್ ಮತ್ತು ಇತರರು ಆರೋಪಿಗೆ ಹೊಡೆದು ಆತ ಆಸ್ಪತ್ರೆಯಲ್ಲಿ ದಾಖಲಾದ ಬಗ್ಗೆ ದಿನಪತ್ರಿಕೆಯಲ್ಲಿ ಬಂದಿತ್ತು ಎಂದರೆ ಗೊತ್ತಿಲ್ಲ. ದಿನಪತ್ರಿಕೆ ಓದುವ ಅಭ್ಯಾಸ ಇದೆ. ಅಶೋಕ್ ಕೊಟ್ಯಾನ್ ಹಾಗೂ ಇತರರು ಆ ದೂರನ್ನು ರಾಜಿ ಮಾಡಿಕೊಳ್ಳುವಂತೆ ಆರೋಪಿಗೆ ಒತ್ತಾಯಿಸುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಆ ಕಾರಣಕ್ಕಾಗಿ ನನ್ನ ಮೂಲಕ ಆರೋಪಿ ವಿರುದ್ಧ ಎಲ್ಲರೂ ಸೇರಿಕೊಂಡು ದೂರು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಿಜವಾಗಿಯೂ ಆರೋಪಿ ನಿಮ್ಮನ್ನು ಹಿಂಬಾಲಿಸುತ್ತಿದ್ದರೆ, ನಿಮ್ಮ ಸಹೋದ್ಯೋಗಿಗಳು ಆತನನ್ನು ಹಿಡಿದಿದ್ದರೆ ವಿಡಿಯೋ ಮತ್ತು ಭಾವಚಿತ್ರ ತೆಗೆಯಬೇಕಿತ್ತು ಎಂದರೆ ಸಾಕ್ಷಿ ನನ್ನ ಸಮಕ್ಷಮ ಮಾಡಿರುವುದಿಲ್ಲ ನಂತರ ಮಾಡಿರುತ್ತಾರೆ. ಗೋಪಾಲ್ ಟವರ್ಸ್ ಸಂಕೀರ್ಣದ ಅಂಗಡಿ ಮುಂಗಟ್ಟುಗಳಲ್ಲಿ ಸಿ.ಸಿ. ಕ್ಯಾಮರಾ ಇದೆ. ಪ್ರಶ್ನಿತ ಸ್ಥಳದಲ್ಲಿ ಪೋಲಿಸರು ಸಿ.ಸಿ. ಕ್ಯಾಮರಾಗಳನ್ನು ನಿಮ್ಮ ಸಮಕ್ಷಮ ಪರಿಶೀಲಿಸಿದ್ದಾರಾ ಎಂದರೆ ಇಲ್ಲ. ನಮ್ಮ ಕಚೇರಿಯ ಹೊರಗಡೆ ಸಿ.ಸಿ.ಕ್ಯಾಮರಾ ಇರುವುದಿಲ್ಲ. ಐ.ಓ.ಬಿ ಕಟ್ಟಡಕ್ಕೆ ಸಿ.ಸಿ. ಕ್ಯಾಮರಾ ಇತ್ತು ಎಂದರೆ ಗೊತ್ತಿಲ್ಲ. ಪಿರ್ಯಾದಿ ಹಾಗೂಮುಖ್ಯ ವಿಚಾರಣೆಯಲ್ಲಿ ನಡೆದ ಎಲ್ಲಾ ವಿಚಾರಗಳನ್ನು ಹೇಳಿರುತ್ತೀರಾ ಎಂದರೆ ಸಾಕ್ಷಿ ನಾನು ಅರೋಪಿಯನ್ನು ಮೇಲಿನಿಂದ ನೋಡಿರುತ್ತೇನೆ ಎಂಬುದನ್ನು ಬಿಟ್ಟು ಉಳಿದ ವಿಚಾರಗಳನ್ನು ಹೇಳಿರುತ್ತೇನೆ.

ದಿಃ 27-12-2023 ಯಾವ ವಾರ ಎಂದು ಗೊತ್ತಿರುವುದಿಲ್ಲ. ದಿಃ 27-12-2023 ರಂದು ಆರೋಪಿ ನನ್ನನ್ನು ಮಾತನಾಡಿಸಿರುವುದನ್ನು ಬಿಟ್ಟು ಬೇರೆ ದಿನ ಮಾತನಾಡಿಸಿರುತ್ತಾರಾ ಎಂದರೆ ಸಾಕ್ಷಿ ಪ್ರಶ್ನಿತ ಘಟನಾ ದಿನದ ಮೂರು ದಿನಗಳ ಹಿಂದೆ ಮಾತನಾಡಿಸಿರುತ್ತಾರೆ. ಏನು ಮಾತುಕತೆ ಆಗಿರುತ್ತದೆ ಎಂದು ಈಗ ನೆನಪಾಗುತ್ತಿಲ್ಲ. ಪ್ರಶ್ನಿತ ಘಟನೆ ನಡೆಯದ ಕಾರಣ ನನ್ನ ಪಿರ್ಯಾದಿ, ಮುಖ್ಯ ವಿಚಾರಣೆ, ನ್ಯಾಯಾಧೀಶರ ಮುಂದಿನ ಹೇಳಿಕೆಯಲ್ಲಿ ಬೇರೆ ಬೇರೆ ರೀತಿಯಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದಿಯಲ್ಲಿ 'ಓಯ್ ಈಗ ಬಂದೆಯಾ', ಮುಖ್ಯ ವಿಚಾರಣೆಯಲ್ಲಿ 'ಈಗ ಕೆಲಸ ಆಯಿತಾ' ಹಾಗೂ ನ್ಯಾಯಾಧೀಶರ ಮಂದೆ ನೀಡಿದ ಹೇಳಿಕೆಯಲ್ಲಿ 'ಭಾನುವಾರ ಫ್ರೀ ಇರುತ್ತೀರಾ' ಎಂದು

ಬೇರೆ ಬೇರೆ ರೀತಿಯಾಗಿ ಹೇಳಿದ್ದು, ಘಟನೆ ನಡೆಯದ ಕಾರಣ ಆ ರೀತಿ ಹೇಳಿರುತ್ತೇನೆ ಎಂದರೆ ಸಾಕ್ಷಿ ಮೂರು ರೀತಿಯಾಗಿಯೂ ಆರೋಪಿ ಕೇಳಿರುತ್ತಾರೆ ಎಂದು ನುಡಿಯುತ್ತಾರೆ. ಮೂರು ಶಬ್ದಗಳನ್ನು ಒಟ್ಟಿಗೆ ಹೇಳದೇ ಇರಲು ಏನುಕಾರಣ ಎಂದರೆ ಮರೆತು ಹೋಗಿರುತ್ತದೆ. ನಮ್ಮ ಸಂಸ್ಥೆ ಮ್ಯಾನೇಜರ್ ಮುಂದೆ ಹೋಗಲು ಹೇಳಿ ನನ್ನನ್ನು ಹಿಂಬಾಲಿಸಿಕೊಂಡು ಬಂದಿರುವುದಿಲ್ಲ.

ಈ ಹಂತದಲ್ಲಿ ನಾಯಾಲಯದ ಕಲಾಪ ಮುಗಿದಿದ್ದು, ಮುಂದುವರಿದ ಪಾಟೀ ಸವಾಲಿಗೆ ಮುಂದುಹಾಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ